ಯಹೂದಿಗಳಿಗೆ ಅಥವಾ ಕ್ರೈಸ್ತರಿಗೆ ನೀವು ಮುಂದಾಗಿ ಸಲಾಂ ಹೇಳಬೇಡಿ. ನೀವು ರಸ್ತೆಯಲ್ಲಿ ಅವರಲ್ಲೊಬ್ಬರನ್ನು ಎದುರುಗೊಂಡರೆ, ಅವರಿಗೆ ಅತ್ಯಂತ ಇಕ್ಕಟ್ಟಾಗುವುದರ ಕಡೆಗೆ ಅವರನ್ನು ನಿರ್ಬಂಧಿಸಿರಿ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹನ ಸಂದೇಶವಾಹಕರು
(ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಯಹೂದಿಗಳಿಗೆ ಅಥವಾ ಕ್ರೈಸ್ತರಿಗೆ ನೀವು ಮುಂದಾಗಿ ಸಲಾಂ ಹೇಳಬೇಡಿ. ನೀವು ರಸ್ತೆಯಲ್ಲಿ ಅವರಲ್ಲೊಬ್ಬರನ್ನು ಎದುರುಗೊಂಡರೆ, ಅವರಿಗೆ ಅತ್ಯಂತ ಇಕ್ಕಟ್ಟಾಗುವುದರ ಕಡೆಗೆ ಅವರನ್ನು ನಿರ್ಬಂಧಿಸಿರಿ."
[صحيح] [رواه مسلم]

ಯಹೂದಿಗಳು ಮತ್ತು ಕ್ರೈಸ್ತರಿಗೆ ಮುಂದಾಗಿ ಸಲಾಂ ಹೇಳುವುದನ್ನು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಿಷೇಧಿಸುತ್ತಿದ್ದಾರೆ. ಇತರ ಸತ್ಯನಿಷೇಧಿಗಳಿಗೆ ವ್ಯತಿರಿಕ್ತವಾಗಿ ಅವರು ಮುಸ್ಲಿಂ ದೇಶದಲ್ಲಿ ವಾಸಿಸುವ ಪ್ರಜೆಗಳಾಗಿದ್ದರೂ ಸಹ. ಅದೇ ರೀತಿ, ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ವಿವರಿಸುವುದೇನೆಂದರೆ, ನಾವು ರಸ್ತೆಯಲ್ಲಿ ಅವರಲ್ಲೊಬ್ಬರನ್ನು ಎದುರುಗೊಂಡರೆ, ಅವರನ್ನು ದಾರಿಯ ಅತ್ಯಂತ ಇಕ್ಕಟ್ಟಾದ ಬದಿಯಿಂದ ಚಲಿಸುವಂತೆ ನಿರ್ಬಂಧಿಸಬೇಕು. ಸತ್ಯವಿಶ್ವಾಸಿ ದಾರಿಯ ಮಧ್ಯಭಾಗದಲ್ಲಿ ನಡೆಯಬೇಕಾದವನಾಗಿದ್ದಾನೆ ಮತ್ತು ಸತ್ಯನಿಷೇಧಿಯು ದಾರಿ ಬಿಟ್ಟು ಕೊಡಬೇಕಾದವನಾಗಿದ್ದಾನೆ. ಮುಸಲ್ಮಾನನು ಯಾವುದೇ ಸ್ಥಿತಿಯಲ್ಲೂ ಅಲ್ಪನಾಗಬಾರದು.

http://www.sunnah.global/hadeeth/kn/show/5347